ಕರ್ನಾಟಕ ವಿಧಾನ ಪರಿಷತ್ತು

144 ನೇ ಅಧಿವೇಶನ 2021

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 375

ಮಾನ್ಯ ಸದಸ್ಯರ ಹೆಸರು : ಶ್ರೀ. ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 15-09-2021

ಉತ್ತರಿಸುವ ಸಚಿವರು : ಮಾನ್ಯ ಲೋಕೋಪಯೋಗಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಮಂಜೂರಾದ ಕಿರು ಹಾಗೂ ಬೃಹತ್ ಸೇತುವೆಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಎಷ್ಟು ಸೇತುವೆಗಳು ಪೂರ್ಣಗೊಂಡಿದೆ; ಬಾಕಿ ಇರುವ ಸೇತುವೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದಲ್ಲಿ 2018-19, 2019-20 ಮತ್ತು 2020-21 ರ ಸಾಲಿನಲ್ಲಿ ಒಟ್ಟು 565 ಸೇತುವೆಗಳನ್ನು ಕೈಗೊಳ್ಳಲಾಗಿದ್ದು, ಇವುಗಳಲ್ಲಿ 484 ಕಿರು ಸೇತುವೆಗಳು ಹಾಗೂ 81 ಬೃಹತ್ ಸೇತುವೆಗಳು ಇರುತ್ತವೆ. ಇದರಲ್ಲಿ 227 ಸೇತುವೆಗಳು ಪೂರ್ಣಗೊಂಡಿರುತ್ತವೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
ಆ)	12 ಕಿ.ಮೀ ದೂರದ ದಾರಿಯನ್ನು ಕೇವಲ 2 ಕಿ.ಮೀ ಗೆ ಕಡಿಮೆಗೊಳಿಸುವ ಕುಂದಾಪುರ-ಗಂಗೊಳ್ಳಿ ಸೇತುವೆ ರಚನೆ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಸೇತುವೆಯ ಅಂದಾಜು ವೆಚ್ಚವೆಷ್ಟು; ಯಾವ ಕಾಲಮಿತಿಯಲ್ಲಿ ಸೇತುವೆ ಪೂರ್ಣಗೊಳಿಸಲಾಗುವುದು;	ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕಿನ ಕುಂದಾಪುರ-ಗಂಗೊಳ್ಳಿ ಸೇತುವೆ ಕಾಮಗಾರಿಯನ್ನು ರೂ.120.00 ಕೋಟಿಗಳ ರೇಖಾ ಅಂದಾಜು ಮೊತ್ತದಲ್ಲಿ ನಿರ್ಮಾಣ ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.
ಇ)	ಕುಂದಾಪುರ ತಾಲ್ಲೂಕಿನ ವಾರಾಹಿ ನದಿಗೆ ಸೌಡ ಎಂಬಲ್ಲಿ ಸೇತುವೆ ರಚನೆಯು ಯಾವ ಹಂತದಲ್ಲಿದೆ; ಮತ್ತು ಯಾವ ಯೋಜನೆಯಡಿ ಮಂಜೂರಾಗಿರುತ್ತದೆ; ಈ ಕಾಮಗಾರಿಯ ಅಂದಾಜು ಮೊತ್ತವೆಷ್ಟು; ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು; (ಆದೇಶ ಪ್ರತಿಯನ್ನು ಒದಗಿಸುವುದು)	ಕುಂದಾಪುರ ತಾಲ್ಲೂಕಿನ ವಾರಾಹಿ ನದಿಗೆ ಸೌಡ ಎಂಬಲ್ಲಿ ಸೇತುವೆ ರಚನೆಯು ಲೆಕ್ಕಶೀರ್ಷಿಕೆ 5054-NABARD RIDF - XXVII (Bridges) ಯೋಜನೆಯಡಿ ರೂ.1650.00 ಲಕ್ಷಗಳ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.
ಈ)	ಕುಂದಾಪುರ ತಾಲ್ಲೂಕಿನ ವಾರಾಹಿ ನದಿಗೆ ಕಂಡ್ಲೂರಿನಲ್ಲಿ ನಿರ್ಮಿಸಲಾದ ರಾಜ್ಯ ಹೆದ್ದಾರಿಯಲ್ಲಿನ ಸೇತುವೆಯು ಶಿಥಿಲಾವಸ್ಥೆಯನ್ನು ತಲುಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸೇತುವೆಯ ಪುನರ್ ನಿರ್ಮಾಣದ ಬಗ್ಗೆ ಸರ್ಕಾರದ ಕ್ರಮವೇನು?	PRAMC ವತಿಯಿಂದ ಗುರುತಿಸಲ್ಪಟ್ಟಿರುವ 43 ಬೃಹತ್ ಸೇತುವೆಗಳ ದುರಸ್ತಿ/ಪುನಶ್ಚೇತನ ಕಾಮಗಾರಿಗಳ ಪಟ್ಟಿಯಲ್ಲಿ ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕಿನ, ವಾರಾಹಿ ನದಿಗೆ ಕಂಡ್ಲೂರಿನ ಹತ್ತಿರ ರಾಜ್ಯ ಹೆದ್ದಾರಿ-52 ರ ಸರಪಳಿ 78.50 ಕಿ.ಮೀ ಯಲ್ಲಿ ಸೇತುವೆ ದುರಸ್ತಿ/ಪುನಶ್ಚೇತನ/ನಿರ್ಮಾಣ ಕಾಮಗಾರಿ ಕೈಗೊಳ್ಳಲು ಶಿಫಾರಸ್ಸು ಮಾಡಲಾಗಿದೆ. ಸದರಿ ಸೇತುವೆಯ ದುರಸ್ತಿ/ಪುನಶ್ಚೇತನ/ಪುನರ್ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕೆ.ಆರ್.ಡಿ.ಸಿ.ಎಲ್ ವತಿಯಿಂದ ಎಂಪ್ಯಾನಲ್ ಆಗಿರುವ ಸಮಾಲೋಚಕರಾದ ಮೆ॥ ಬಾಧ್ಯ ಎಂಜಿನಿಯರಿಂಗ್ ಸರ್ವೀಸಸ್ ಪ್ರೈ. ಲಿಮಿಟೆಡ್ ರವರಿಗೆ ಸೇತುವೆ ಅನುಷ್ಠಾನಕ್ಕೆ ಅಗತ್ಯವಾಗಿರುವ ವಿಸ್ತೃತಾ ಯೋಜನಾ ವರದಿ ತಯಾರಿಸಲು ದಿನಾಂಕ 28-04-2021 ರಲ್ಲಿ ವಹಿಸಲಾಗಿರುತ್ತದೆ.

ಸಂಖ್ಯೆ: ಲೋಇ E-251 ಇಎಪಿ 2021

(ಸಿ.ಸಿ. ಪಾಟೀಲ್)

ಲೋಕೋಪಯೋಗಿ ಸಚಿವರು

ಅನುಬಂಧ-1

ಕ್ರ. ಸಂ.	ಜಿಲ್ಲೆಗಳ ಹೆಸರು	2018-19			2019-20			2020-21		
		ಬೃಹತ್ ಸೇತುವೆಗಳ ಸಂಖ್ಯೆ	ಕಿರು ಸೇತುವೆಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ	ಬೃಹತ್ ಸೇತುವೆಗಳ ಸಂಖ್ಯೆ	ಕಿರು ಸೇತುವೆಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ	ಬೃಹತ್ ಸೇತುವೆಗಳ ಸಂಖ್ಯೆ	ಕಿರು ಸೇತುವೆಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ
1	ಮಂಡ್ಯ	2	15	0						
2	ಮೈಸೂರು	0	13	5						
3	ಹಾಸನ	3	8	0	0	1	1			
4	ಕೊಡಗು	0	6	0				0	1	1
5	ಬೆಂಗಳೂರು ನಗರ	1	4	3						
6	ಬೆಂಗಳೂರು	0	0	0						
7	ಚಿಕ್ಕಬಳ್ಳಾಪುರ	0	5	4						
8	ಕೋಲಾರ	0	1	0						
9	ತುಮಕೂರು	0	16	10						
10	ಚಿತ್ರದುರ್ಗ	1	19	0	5	3	0	5	4	3
11	ದಕ್ಷಿಣ ಕನ್ನಡ	1	10	1	0	7	3	5	2	0
12	ಚಿಕ್ಕಮಗಳೂರು	6	4	3	3	0	3	6	0	6
13	ಶಿವಮೊಗ್ಗ	5	10	6	0	3	0	0	0	0
14	ಉಡುಪಿ	1	24	22	0	16	16	0	16	16
15	ಧಾರವಾಡ	4	12	3	0	0	0	0	0	0
16	ಉತ್ತರಕನ್ನಡ	7	26	2	0	2	1	0	1	1
17	ಬೆಳಗಾವಿ	9	18	6	1	9	10	0	6	3
18	ರಾಯಚೂರು	1	8	0	2	3	0	1	3	0
19	ವಿಜಯಪುರ	1	9	0	0	0	0	0	0	0
20	ಬಳ್ಳಾರಿ	1	16	14	1	24	19	0	2	2
21	ಕೊಪ್ಪಳ	0	7	4	0	1	1	0	0	0
22	ಕಲಬುರ್ಗಿ	4	15	9	0	7	6	0	0	0
23	ಗದಗ	0	15	3	0	2	2	0	2	2
24	ಬಾಗಲಕೋಟೆ	2	8	6	0	6	6	0	7	7
25	ದಾವಣಗೆರೆ	0	5	0	0	2	2	0	1	1
26	ಬೀದರ್	0	15	5	1	1	1	0	0	0
27	ಹಾವೇರಿ	2	19	0	0	0	0	0	0	0
28	ಯಾದಗಿರಿ	0	1	0	0	0	0	0	1	0
29	ಚಾಮರಾಜನಗರ	0	24	1						
30	ರಾಮನಗರ	0	16	6	0	1	1			
31	ವಿಜಯನಗರ	0	1	0						
ಒಟ್ಟು		51	350	113	13	88	72	17	46	42